## ಯುವವೇದಿಕೆ

# ಮತ್ತೊಮ್ಮೆ ಶಿಕ್ಷಣ ಪಡೆಯುವಂತಾದರೆ....

ವಿಜಯಕುಮಾರ

**ಬದುಕಿನಲ್ಲಿ** ಯಾವುದಾದರೂ ಒಂದು ನೌಕರಿಯನ್ನು ಸಂಪಾದಿಸಿಕೊಂಡು ಸಂಸಾರದಲ್ಲಿ ನೆಲೆಯೂರುತ್ತಿರುವ ಯಾವುದೇ ವ್ಯಕ್ತಿಯನ್ನು ತನಗೆ ಕಳೆದುಹೋದ ಬಾಲ್ಯ ಮತ್ತೆ ಬರುವಂತಾದರೆ, ಮತ್ತೆ ತಾನು ವಿದ್ಯಾಭ್ಯಾಸ ಜೀವನ ನಡೆಸಬೇಕಾದರೆ ತಾನು ಯಾವ ರೀತಿಯ ಶಿಕ್ಷಣ ಬಯಸಬಹುದೆಂದು ಕೇಳಿದಾಗ ಆತ ಒಂದು ಕ್ಷಣ ತಬ್ಬಿಬ್ಬಾಗಬಹುದು. ಮೊದಲನೆಯದಾಗಿ ಕಳೆದು ಹೋದ ಬಾಲ್ಯ ಮತ್ತೆ ಹಿಂದಿರುಗಲಾರದೆಂದು ಆತನಿಗೆ ಗೊತ್ತು. ಆದರೂ ಒಂದು ಊಹಾತ್ಮಕ ಸನ್ನಿವೇಶವಾಗಿಯೂ (as a hypothetical question) ಆ ಪ್ರಶ್ನೆಯನ್ನು ಎದುರಿಸಲಾರ. ಕಾರಣ ತಮ್ಮ ಬಾಲ್ಯದ ಅನುಭವಗಳನ್ನಾಗಲೀ, ತಮಗೆ ಶಿಕ್ಷಣ ಏನು ನೀಡಿದೆ ಎಂಬುದನ್ನಾಗಲೀ ಪ್ರಶ್ನಿಸಿ ತಮ್ಮನ್ನೇ ತಾವು ಎದುರು ಹಾಕಿಕೊಳ್ಳುವ ಗೋಜಿಗೆ ಅನೇಕರು ಹೋಗುವುದಿಲ್ಲ. ಆದರೆ ಇಂತಹ ಒಂದು ಪ್ರಶ್ನೆಯನ್ನು ಸ್ವಾಮಿ ವಿವೇಕಾನಂದರು ತಾವು ಹಾಕಿಕೊಂಡಿದ್ದದು ಮಾತ್ರವೇ ಅಲ್ಲ, ತಾವು ಏನು ಮಾಡುತ್ತಿದ್ದರು ಎಂಬುದನ್ನು ಸಹ ಮನಮುಟ್ಟುವ ಈ ನುಡಿಗಳಲ್ಲಿ ತಿಳಿಸಿದ್ದಾರೆ. : "ನಾನು ಪುನಃ ವಿದ್ಯಾಭ್ಯಾಸವನ್ನು ಪ್ರಾರಂಭಿಸಬೇಕಾದರೆ, ಈ ನಿಟ್ಟಿನಲ್ಲಿ ನನಗೇನಾದರೂ ಸ್ವಲ್ಪ ಸ್ವಾತಂತ್ರ್ಯವಿದ್ದರೆ ನಾನು ವಿಷಯಗಳನ್ನು ಕಲಿತುಕೊಳ್ಳುವುದಿಲ್ಲ. ನಾನು ಮೊದಲು ಮನಸ್ಸನ್ನು ಹೇಗೆ ಏಕಾಗ್ರಗೊಳಿಸುವುದು ಮತ್ತು ಅದನ್ನು ಹೇಗೆ ಹಿಂದಕ್ಕೆ ಸೆಳೆಯುವುದು ಎಂಬುದನ್ನು ಕಲಿತುಕೊಂಡು ಅನಂತರ ಆ ಸರಿಯಾದ ಉಪಕರಣದಿಂದ ನನ್ನ ಇಚ್ಛಾಪ್ರಕಾರ ವಿಷಯಗಳನ್ನು ಸಂಗ್ರಹಿಸುತ್ತೇನೆ... ಯಾವ ತರಬೇತಿಯ ಮೂಲಕ ಇಚ್ಛಾಶಕ್ತಿಯ ಪ್ರವಾಹ ಮತ್ತು ಅದರ ಅಭಿವ್ಯಕ್ತಿಗಳು ನಿಯಂತ್ರಣಕ್ಕೆ ಒಳಗಾಗಿ ಫಲಕಾರಿಯಾಗುವವೋ ಅದೇ ಶಿಕ್ಷಣ...ವಿಚಾರಗಳನ್ನು ನರವ್ಯೂಹಗಳೊಂದಿಗೆ ಒಂದಾಗಿಸುವುದೇ ಶಿಕ್ಷಣ" (ರಾಷ್ಟ್ರಜಾಗೃತಿ, ಪುಟ, ೪೭)

ಸಮಸ್ತ ಜ್ಞಾನಭಂಡಾರಕ್ಕೆ ಇರುವ ಏಕೈಕ ಬೀಗದಕೈ ಎಂದರೆ ಏಕಾಗ್ರತೆ, ಏಕಾಗ್ರತೆಯ ಸಾಧನೆಯೇ ಶಿಕ್ಷಣಪ್ರಕ್ರಿಯೆಯ ತಿರುಳು ಎಂದು ಸ್ವಾಮೀಜಿ ಸ್ಪಷ್ಟಪಡಿಸಿದ್ದಾರೆ. ಏಕಾಗ್ರತೆ ಒಂದು ಹರಿತವಾದ ಸಾಧನವಿದ್ದಂತೆ. ಯಾವುದನ್ನೇ ಆಗಲಿ ಬಗೆದು ಆ ವಸ್ತುವಿನ ಆಳಕ್ಕೆ ಹೋಗಿ, ಅಲ್ಲಿ ಕೆಲಸ ಮಾಡುತ್ತಿರುವ ಶಕ್ತಿಗಳನ್ನು, ರಹಸ್ಯಗಳನ್ನು ತೆರೆದಿಟ್ಟು ಆ ವಿಷಯದ ಬಗ್ಗೆ ಒಳನೋಟಗಳನ್ನು ದಕ್ಕಿಸಿಕೊಡುವ ಏಕೈಕ ಸಾಧನ ಇದು. ನಮ್ಮ ನರಗಳ ಮೇಲೆ, ಪ್ರಾಣಶಕ್ತಿಗಳ ಮೇಲೆ, ಮನಸ್ಸಿನ ಇಚ್ಛಾಶಕ್ತಿಯ ಮೇಲೆ ಸಂಪೂರ್ಣ ಹಿಡಿತವನ್ನು ತಂದುಕೊಡುವ ತರಬೇತಿಯ ಬಗ್ಗೆ ನಮ್ಮ ಅವಜ್ಞತೆ ವ್ಯಾಪಕವಾಗಿದೆ. ನಮ್ಮ ವ್ಯಕ್ತಿತ್ವದ ಸೂಕ್ಷ್ಮತರ ಆಯಾಮದ ಶಕ್ತಿಗಳ ಬಗ್ಗೆ, ಅಷ್ಟೇಕೆ ನಮ್ಮ ಸುತ್ತಮುತ್ತಲಿನ ಪ್ರಪಂಚದ ಬಗ್ಗೆಯೇ ನಮ್ಮ ಸಂವೇದನೆಗಳನ್ನು ಜಡ್ಡುಗಟ್ಟಿಸಿರುವ ಒಂದು ಶಿಕ್ಷಣ ವ್ಯವಸ್ಥೆಗೆ ಒಗ್ಗಿಹೋಗಿರುವ ನಾವು ಸ್ವಾಮೀಜಿಯವರ ಮಾತಿನ ಮಹತ್ವವನ್ನು ಅರಿಯುವುದು ಕಷ್ಟವೇ. ಪುಸ್ತಕ-ಕಲಿಕೆ, ಉರು ಹಚ್ಚುವುದು, ಪರೀಕ್ಷೆಯಲ್ಲಿ ವಾಂತಿ ಮಾಡುವುದು—ಇವುಗಳೇ ನಮ್ಮ ಶಕ್ತಿ ಉತ್ಸಾಹಗಳೆಲ್ಲವನ್ನೂ ಹಿಂಡಿಬಿಟ್ಟಿವೆ. ಇವುಗಳಿಗೇ ಪ್ರಾಧಾನ್ಯವನ್ನು ಕೊಟ್ಟು ನಮ್ಮ ವ್ಯಕ್ತಿತ್ವದ ಸೂಕ್ಷ್ಮತರ ಆಯಾಮಗಳ ವಿಕಾಸವನ್ನು ಕಡೆಗಣಿಸಿರುವ ಶಿಕ್ಷಣ ನಮ್ಮನ್ನು ಒಂದು ರೀತಿಯ ಪಾರ್ಶ್ವವಾಯು ಬಡಿದಂತಹ ವ್ಯಕ್ತಿಗಳನ್ನಾಗಿಸಿದೆ. ಅದನ್ನೇ ಶಿಕ್ಷಣವೆಂದು ಒಪ್ಪಿಕೊಂಡು ಬಂದಿರುವ ನಾವು ಪುಸ್ತಕ-ಕಲಿಕೆ ಬೇರೆ, ಜ್ಞಾನನಿಷ್ಠೆ (commitment to knowledge) ಬೇರೆ ಎಂಬ ಮಾತನ್ನು ಮರೆತಿದ್ದೇವೆ. "ಎಲ್ಲ ಗ್ರಂಥಗಳೂ ವ್ಯರ್ಥ, ಅಂತರಂಗದ ಗ್ರಂಥ ತೆರೆಯುವವರೆಗೂ" ಎಂಬುದನ್ನು ಆಳವಾಗಿ ನಂಬಿದವರು ಸ್ವಾಮೀಜಿಯವರು. ಅಂತರಂಗದ ಕದತಟ್ಟಿ ಬರುವ ಜ್ಞಾನಕ್ಕಾಗಿ ಎಂತಹ ತ್ಯಾಗಕ್ಕಾದರೂ ಸಿದ್ಧವಾಗಿರುವ ನಿದರ್ಶನಗಳು ಜಗತ್ತಿನ ಸಾಹಿತ್ಯದಲ್ಲಿ ಅಪರೂಪವೇನಲ್ಲ.

> ಕೇವಲ ಮಾಹಿತಿ ಸಂಗ್ರಹಣೆ ಮಾಹಿತಿಯ ಅಭಾವದಷ್ಟೇ ಆಲೋಚನೆಗೆ ಅಡಚಣೆಯಾಗುತ್ತದೆ.
>
> — ಎರಿಕ್ ಫ್ರೋಮ್ (Eric Fromm)

ನಮ್ಮ ಶಿಕ್ಷಣ ನಮ್ಮ ಒಟ್ಟಾರೆ ಬದುಕಿಗೆ, ನಮ್ಮ ವಿಕಾಸಕ್ಕೆ ಎಷ್ಟು ಅನುಕೂಲ ಮಾಡಿದೆ, ಎಷ್ಟು ಬಾಧಕವಾಗಿದೆ, ಈ ದಿಕ್ಕಿನಲ್ಲಿ ನಾವು ಪಡೆದದ್ದೆಷ್ಟು, ಕಳಕೊಂಡದ್ದೆಷ್ಟು, ನಮ್ಮ ಬದುಕನ್ನು ಎಷ್ಟು ಶ್ರೀಮಂತವಾಗಿಸಿದೆ, ಎಷ್ಟು ಬರಡಾಗಿಸಿದೆ ಎಂದು ಎಂದಾದರೂ ಒಮ್ಮೆ ಆಯವ್ಯಯ ಪಟ್ಟಿ ತೆಗೆದದ್ದೇ ಆದರೆ ನಾವು ಎಷ್ಟು ಭ್ರಾಮಕ ಜಗತ್ತಿನಲ್ಲಿ ವಾಸಿಸುತ್ತಿದ್ದೇವೆ ಎಂಬ ಅರಿವು ನಮಗಾಗುತ್ತಿತ್ತು.

ಯಾವುದೇ ನಿಜವಾದ ಶೈಕ್ಷಣಿಕ ಪ್ರಕ್ರಿಯೆ ದೇಹ, ಮನಸ್ಸು, ಮತ್ತು ಅವುಗಳಿಗಿಂತ ಭಿನ್ನವಾಗಿರುವ ಅಸ್ತಿತ್ವ ಆತ್ಮ—ಇವುಗಳಲ್ಲಿನ ಶಕ್ತಿಯನ್ನು ಹೊರತರುವುದೇ ಆಗಿರುತ್ತದೆ. Education ಪದದ

ನಿಜವಾದ ಅರ್ಥವೆಂದರೆ ಹೊರಹೊಮ್ಮುವಂತೆ ಅಥವಾ ಪ್ರಕಾಶಗೊಳ್ಳುವಂತೆ ಮಾಡುವುದು ಎಂದೇ. ಹೀಗೆ ಪ್ರಕಾಶಗೊಳ್ಳಲು ಸಾಧ್ಯವಾಗುವಂತೆ ನಮ್ಮ ದೇಹ, ಬುದ್ಧಿ ಹಾಗೂ ಭಾವ ಒಂದು ಸಂಸ್ಕರಣ ಪ್ರಕ್ರಿಯೆಗೆ ಒಳಪಡಬೇಕು. ಶರೀರದ ಜೊತೆಗೆ ಬುದ್ಧಿಯ ವಿಕಾಸಕ್ಕಾಗಿ ಶಿಕ್ಷಣ, ಬುದ್ಧಿಯ ಜೊತೆಗೆ ಭಾವದ ವಿಕಾಸಕ್ಕಾಗಿ ಶಿಕ್ಷಣ ಈ ರೀತಿ ಸರ್ವತೋಮುಖವಾದ ಸಂಸ್ಕರಣವನ್ನು— ಸ್ವಾಮಿ ವಿವೇಕಾನಂದರು ಬಹಳ ಮಾರ್ಮಿಕವಾದ ರೀತಿಯಲ್ಲಿ **'ಕಬ್ಬಿಣದಂತಹ ಮಾಂಸಖಂಡಗಳು, ಉಕ್ಕಿನಂತಹ ನರಗಳು, ಮತ್ತು ಸಿಡಿಲಿಗಿಂತ ಶಕ್ತಿಯುತವಾದ ಹೃದಯವುಳ್ಳ ಪುರುಷ ಸಿಂಹಗಳ ನಿರ್ಮಿತಿ'** ಎಂದರು. ಇಂತಹ ಶಿಕ್ಷಣದ ಮೂಲಕ ಬುದ್ಧಿ ಕುದುರುತ್ತದೆ, ಭಾವ ಅರಳುತ್ತದೆ. ಬುದ್ಧಿಯಿಂದ ಮಾನವನು ಸಾಮಾನ್ಯ ಜ್ಞಾನ, ವಿಜ್ಞಾನ, ತತ್ತ್ವಜ್ಞಾನಗಳ ಕ್ಷೇತ್ರದಲ್ಲಿ ಮುನ್ನಡೆ ಸಾಧಿಸಿ ಜೀವನ ಸೌಕರ್ಯಕ್ಕಾಗಿ ಅದ್ಭುತವಾದ ಸಾಧನಸಾಮಗ್ರಿಯನ್ನು ನಿರ್ಮಿಸಿಕೊಂಡಿದ್ದಾನೆ. ಆದರೆ ಜೀವನ ಕಲೆಯಲ್ಲಿ ಭಾವದ ವಿಕಾಸ ಅವನಿಗೆ ಹೆಚ್ಚು ಸಹಕಾರಿಯಾಗುತ್ತದೆ. ನೀತಿ, ದಯೆ, ಧರ್ಮ, ಸ್ನೇಹ, ವಿಶ್ವಾಸ, ಔದಾರ್ಯ, ಶಾಂತಿ, ಇವುಗಳಿಗೆ ಸ್ಥಾನ ದೊರೆಯುವುದು ಭಾವದ ವಿಕಾಸದಿಂದ. ಇತರರೊಡನೆ ಸೌಹಾರ್ದದಿಂದ ಸಹಕರಿಸಿ, ತನಗೂ ಸುಖವಾಗುವಂತೆ, ಇತರರೊಡನೆ ಸಮರಸವಾಗಿ 'ಜೀವಿಸು ಮತ್ತು ಜೀವಿಸಗೊಡು'(Live and let live) ಎನ್ನುವ ಜೀವನಕಲೆ ಅವನಿಗೆ ಸಾಧ್ಯವಾಗುತ್ತದೆ. ಈ ರೀತಿ ದೇಹ, ಬುದ್ಧಿ ಹಾಗೂ ಭಾವದ ಸಮಗ್ರ ಬೆಳವಣಿಗೆಯ ಶಿಕ್ಷಣವನ್ನು ಮನುಷ್ಯ ನಿರ್ಮಿತಿಯ ಶಿಕ್ಷಣವೆಂದು ಸ್ವಾಮಿ ವಿವೇಕಾನಂದರು ಕರೆದರು.

**'ಶಿಕ್ಷಣದಿಂದ ಶೀಲ ನಿರ್ಮಾಣವಾಗಬೇಕು, ಮನಸ್ಸಿನ ಶಕ್ತಿ ವೃದ್ಧಿಸಬೇಕು, ಬುದ್ಧಿ ವಿಶಾಲವಾಗಬೇಕು, ಇದರಿಂದ ವ್ಯಕ್ತಿ ತನ್ನ ಕಾಲಮೇಲೆ ತಾನೇ ನಿಲ್ಲುವಂತೆ ಆಗಬೇಕು'**

—ಸ್ವಾಮಿ ವಿವೇಕಾನಂದರು

ಆದರೆ ಚಾಲ್ತಿಯಲ್ಲಿರುವ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣದ ಇಂತಹ ಉದಾತ್ತವಾದ ಧ್ಯೇಯ, ಗುರಿಗಳನ್ನು ಸಾಕಾರಗೊಳಿಸಲು ಯಾವ ಪ್ರಯತ್ನ ನಡೆದಿದೆ ಎಂಬುದು ಮುಖ್ಯ. ಇಂದಿನ ವಿದ್ಯಾಭ್ಯಾಸದ ಕ್ರಮದಲ್ಲಿ ಮಾಹಿತಿ ಸಂಗ್ರಹಣೆಗೇ ಪ್ರಾಶಸ್ತ್ಯ. ವಿದ್ಯಾಭ್ಯಾಸದ ಹೆಸರಿನಲ್ಲಿ ಕೇವಲ ಮಾಹಿತಿಗಳನ್ನು ಮಿದುಳಿಗೆ ತುರುಕುತ್ತಾ ಹೋದರೆ ಆ ಅರಗಿಸಿಕೊಳ್ಳಲಾಗದ ಮಾಹಿತಿಗಳೆಲ್ಲಾ ಅಲ್ಲಿ ಸದಾ ಹುಚ್ಚೆದ್ದು ಗೊಂದಲ ಉಂಟುಮಾಡುವುದು ಸಹಜ. ಜೀವನ ನಿರ್ಮಾಣದ, ಪೌರುಷ ನಿರ್ಮಾಣದ, ಶೀಲ ನಿರ್ಮಾಣದ ಜ್ಞಾನವನ್ನು ಶಿಕ್ಷಣದ ಮೂಲಕ ಮೈಗೂಡಿಸಿಕೊಳ್ಳಬೇಕು; ಐದೇ ವಿಚಾರಗಳನ್ನು ಅರಗಿಸಿಕೊಂಡು ಜೀವನದಲ್ಲಿ ಅವುಗಳನ್ನು ನಮ್ಮ ಸ್ವಭಾವವನ್ನಾಗಿ ಮಾಡಿಕೊಂಡರೆ ಗ್ರಂಥಾಲಯವನ್ನೇ ಉರು ಹಾಕಿ ನೂರಕ್ಕೆ ನೂರು ಅಂಕ ಗಳಿಸುವುದಕ್ಕಾಗಿ, ಕನಿಷ್ಠಶ್ರಮ ಗರಿಷ್ಠ ಲಾಭದ ಮಾರ್ಗವನ್ನನುಸರಿಸಿ ನಕಲು ಮಾಡಿಯಾದರೂ ತೇರ್ಗಡೆಯಾಗಬೇಕೆಂಬ ಮಂದಿಯೊಡನೆ ಸ್ಪರ್ಧಿಸಿ ವಿಜಯಿಯಾಗುವುದಕ್ಕಿಂತಲೂ ಉತ್ತಮವಲ್ಲವೇ?

ಒಂದು ದೃಷ್ಟಿಯಲ್ಲಿ ಯಾವುದೇ ಒಂದು ಸಮರ್ಥವಾದ ಶಿಕ್ಷಣ ವ್ಯವಸ್ಥೆಗೆ ಕನಿಷ್ಠವಾಗಿ ಇರಲೇಬೇಕಾದ ಮೌಲಿಕ ಲಕ್ಷಣಗಳ ಅಭಾವವಷ್ಟನ್ನೇ ನಾವಿಂದು ಕಾಣುತ್ತಿಲ್ಲ. ಯಾವ ಶಿಕ್ಷಣ ವ್ಯವಸ್ಥೆಯಲ್ಲಿ 'ನಕಾರಾತ್ಮಕ' ಅಂಶಗಳೇ ತುಂಬಿಹೋಗಿವೆ ಎಂದು ಸ್ವಾಮಿ ವಿವೇಕಾನಂದರು ನಮ್ಮನ್ನು ಎಚ್ಚರಿಸುತ್ತಿದ್ದರೋ ಅಂತಹ ಒಂದು ಶಿಕ್ಷಣ ವ್ಯವಸ್ಥೆಯನ್ನೇ ಅನೂಚಾನವಾಗಿ ಉಳಿಸಿಕೊಂಡು ಬಂದಿರುವುದು ಸ್ವತಂತ್ರ ಭಾರತದಲ್ಲಿನ ದೊಡ್ಡ ವಿಡಂಬನೆ. ಸ್ಪರ್ಧಾತ್ಮಕ ಹಾಗೂ ಧಾವಂತ ಬದುಕಿಗೆ ಸರಕುಗಳನ್ನು (ಯಂತ್ರಗಳನ್ನು) ತಯಾರು ಮಾಡುವ ವಿಕೃತವಾದ ಒಂದು ಶಿಕ್ಷಣವ್ಯವಸ್ಥೆಯಲ್ಲಿ ಮೊದಲು ಬಲಿಯಾಗಿರುವುದು ಮಾನವೀಯ ಮೌಲ್ಯಗಳು. ಇಂತಹ ಶಿಕ್ಷಣ ವ್ಯವಸ್ಥೆಗೆ ಕಾರಣವಾಗಿರುವ ಹಾಗೂ ಅದರಿಂದ ಪೋಷಿಸಲ್ಪಡುತ್ತಿರುವ ಸಾಮಾಜಿಕ ವಾತಾವರಣದ ವಿಶ್ಲೇಷಣೆ ಈ ಲೇಖನದ ವ್ಯಾಪ್ತಿಗೆ ಮೀರಿದ್ದು.

ಇಂದಿನ ನಮ್ಮ ಸಾಮಾಜಿಕ ಬದುಕಿನಲ್ಲಿ ಕಾಣುವ ವೈಫಲ್ಯಗಳು, ಕೌಟುಂಬಿಕ ಮೌಲ್ಯಗಳ ಅಭಾವದಿಂದ ಮಕ್ಕಳಲ್ಲಿ ಮನೆ ಮಾಡಿರುವ ಭಾವನೆಗಳ ಅಭದ್ರತೆ (emotional insecurity)—ಇವೇ ಮುಂತಾದ ಸಮಸ್ಯೆಗಳಿಗೆ ಪ್ರಚಲಿತವಾದ ಶಿಕ್ಷಣ ವ್ಯವಸ್ಥೆ ಯಾವ ರೀತಿ ಸ್ಪಂದಿಸುತ್ತಿದೆ ಎಂಬುದೂ ಮುಖ್ಯ. ಪ್ರೀತಿ ವಿಶ್ವಾಸದಿಂದ ತಮ್ಮ ಮಕ್ಕಳಲ್ಲಿ ಸದಭಿರುಚಿಯ ಸಂವೇದನೆಯನ್ನು ಹುಟ್ಟಿಸಿ ಅವರ ಬದುಕನ್ನು ರೂಪಿಸಬೇಕಾದ ತಂದೆತಾಯಿಗಳು ಹಾಗೂ ಅವರ ಮಧುರ ವಿಶ್ವಾಸದಲ್ಲಿ ಅರಳಬೇಕಾದ ಮಕ್ಕಳು ಇಂದು ದೂರದರ್ಶನದಲ್ಲಿ ಬಿತ್ತರಗೊಳ್ಳುವ ಏಕತಾನತೆಯ ಸಿನಿಮಾ ಧಾರಾವಾಹಿ, ಅಂತ್ಯಾಕ್ಷರಿಗಳ ಮೂಲಕ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಿದ್ದಾರೆ. ಎಳೆತನದಲ್ಲಿಯೇ ತಮ್ಮ ಆಳದಲ್ಲಿ ಹೇಳಲಾಗದ ಯಾತನೆಗೆ ಗುರಿಯಾಗುವ ಈ ಮಕ್ಕಳನ್ನು ಮಾನಸಿಕರೋಗಗಳ ಅಪಾಯಕ್ಕೆ ಒಡ್ಡುತ್ತಿರುವುದರ ಬಗ್ಗೆ ಶಿಕ್ಷಣ ವ್ಯವಸ್ಥೆ ಯಾವುದೇ ಕಾಳಜಿಯನ್ನೂ ವ್ಯಕ್ತಪಡಿಸುವಂತೆ ಕಾಣುತ್ತಿಲ್ಲ.

ಇಲ್ಲಿ ಮತ್ತೂ ಒಂದು ಅಂಶವನ್ನೂ ನಾವು ಗಮನಿಸಬೇಕಾಗಿದೆ. ಈ ದೇಶ ತಾಂತ್ರಿಕ ಕ್ಷೇತ್ರದಲ್ಲಿ ಸಾಧಿಸಿರುವ ಅಲ್ಪ ಸ್ವಲ್ಪ ಮುನ್ನಡೆಯನ್ನು ಶಿಕ್ಷಣ ಕ್ಷೇತ್ರದಲ್ಲಿನ ಪ್ರಗತಿ ಎಂದು ಸಮೀಕರಿಸುವುದು ನಮ್ಮ ಮೇಲೆ ನಾವೇ ತಂದುಕೊಂಡಿರುವ ಮತ್ತೊಂದು ಭ್ರಾಂತಿ. ತಾಂತ್ರಿಕ ಕ್ಷೇತ್ರದಲ್ಲಿನ ಮುನ್ನಡೆಯಿಂದ ಒಂದು ಸಭ್ಯ ಜನಾಂಗ ನಿರ್ಮಾಣವಾಗುತ್ತದೆ ಎಂಬ ಖಚಿತತೆ ಏನೂ ಇಲ್ಲ. ರಾಮಯಣದಲ್ಲಿನ ರಾವಣನೇ ಮೊದಲಾದ ರಾಕ್ಷಸ ಸಂತತಿಯಲ್ಲಿ ಏನೆಲ್ಲ ಮಾರಕಾಸ್ತ್ರಗಳಿದ್ದವು! ಅವರು ಆಕಾಶದಲ್ಲಿ ಹಾರಾಡಬಲ್ಲವರಾಗಿದ್ದರು. ದೇವತೆಗಳ ಎದೆಯನ್ನೂ ನಡುಗಿಸುವಂಥ ಅತ್ಯಂತ ಸಮರ್ಥವಾದ ಮಾರಕಾಸ್ತ್ರಗಳು ಅವರಲ್ಲಿದ್ದವು. ಇಂದ್ರನ ಅಮರಾವತಿಯನ್ನೂ ನಾಚಿಸುವಂಥ ನಗರಗಳಿದ್ದವು. ಆದರೆ ಮಾನವೀಯ ಗುಣಗಳ ಸಾಕಾರದಂತಿದ್ದ ರಾಮನಲ್ಲಾಗಲೀ, ಅಥವಾ ಅವನ ಬಂಟರಲ್ಲಾಗಲೀ ಇದ್ದ ಸಭ್ಯ ಸಂಸ್ಕೃತಿ ಅವರಲ್ಲಿ ಇಲ್ಲದ್ದರಿಂದ ತಮ್ಮ ವಿನಾಶವನ್ನು ತಾವೇ ತಂದುಕೊಂಡರು. ತಲತಲಾಂತರಗಳಲ್ಲಿ ಬರುವ ಪೀಳಿಗೆಗಳಿಗೆ ಇಂತಹ ಒಂದು ಸಾರ್ವಕಾಲಿಕ ಸತ್ಯವನ್ನು

ಆದಿ ಕವಿ ವಾಲ್ಮೀಕಿ ನಮ್ಮ ಮುಂದಿಟ್ಟಿರುವುದನ್ನು ನಾವು ಮರೆಯುವಂತಿಲ್ಲ.

"ಶಿಕ್ಷಣವು ಜೀವನೋಪಾಯ ಮಾತ್ರ ಕಲಿಸುವುದಲ್ಲದೆ ಜೀವಿಸುವ 'ಉಪಾಯ'ವನ್ನೂ ಕಲಿಸಬೇಕು."

ಧರ್ಮವೇ ಶಿಕ್ಷಣಪ್ರಕ್ರಿಯೆಯಲ್ಲಿ ಅಂತರ್ನಿಹಿತವಾದ ತಿರುಳು ಎಂದ ಸ್ವಾಮಿ ವಿವೇಕಾನಂದರು ಧರ್ಮ ಎಂಬ ಪದದಿಂದ ಮಾನವ ಸ್ವಭಾವದ ಸನಾತನ ಸತ್ಯಗಳ ಕಡೆ ನಮ್ಮ ಗಮನ ಸೆಳೆದರು. ಮನುಷ್ಯ ಸ್ವಭಾವದ ಸನಾತನ ಸತ್ಯಗಳನ್ನು ಬಾಳಿ ಬದುಕಿ ಅವುಗಳನ್ನು ಪೋಷಿಸಿದ ಕೀರ್ತಿ ಯಾವುದೇ ಒಂದು ಪಂಗಡದವರಿಗೆ ಸೇರಿದ್ದಲ್ಲ. ಮನುಕುಲದ ಕಲ್ಯಾಣದಲ್ಲಿ ಆಸಕ್ತಿಯಿರುವ ಪ್ರತಿಯೊಬ್ಬರಿಗೂ ಸೇರಿದ್ದು. ಅಂತಹ ಸತ್ಯಗಳನ್ನು ಉಪನಿಷತ್ತುಗಳು ನಿರೂಪಿಸುತ್ತವೆ ಮತ್ತು ಯೋಗವೆಂಬ ಪ್ರಾಯೋಗಿಕ ವಿಜ್ಞಾನ ಅದನ್ನು ಪೋಷಿಸಿಕೊಂಡು ಬಂದಿದೆ. ಇಂತಹ ಸಾರ್ವಕಾಲಿಕ ನಿತ್ಯಸತ್ಯಗಳಲ್ಲಿ ಶಿಕ್ಷಣದ ಪ್ರಕ್ರಿಯೆ ಬೇರು ಬಿಡಬೇಕೆಂಬುದು ಸ್ವಾಮೀಜಿಯವರ ನಿಲುವಾಗಿತ್ತು. ಅಂತಹ ನಿಲುವಿನಲ್ಲಿ ಅನ್ವೇಷಕ ಮನಸ್ಸಿಗೇ—ಅದು ಪಾಶ್ಚಾತ್ಯವಿರಲಿ ಪೌರ್ವಾತ್ಯವಿರಲಿ, ಬಾಹ್ಯಜಗತ್ತಿಗೆ ಸಂಬಂಧಿಸಿದ ಜ್ಞಾನವಾಗಲಿ, ಅಂತರಂಗಕ್ಕೆ ಸಂಬಂಧಿಸಿದ್ದೇ ಆಗಲಿ—ಹೆಚ್ಚು ಪ್ರಾಶಸ್ತ್ಯ. ನವ ನವೋನ್ಮೇಷಶಾಲಿಯಾದ ಪ್ರತಿಭೆಗೇ ಅದರಲ್ಲಿ ಆದ್ಯತೆ. ವಿನೂತನವಾದದ್ದನ್ನೆಲ್ಲಾ ಮುಕ್ತವಾಗಿ ಸಂಘಟಿಸಿಕೊಳ್ಳುವ ಶಕ್ತಿಯನ್ನು ಅವರ ಈ ನಿಲುವಿನಲ್ಲಿ ಕಾಣಬಹುದು.

ಯಾರು ಎಲ್ಲದರ ಜ್ಞಾನವನ್ನು ಪಡೆದು ತನ್ನನ್ನು ಮಾತ್ರ ತಿಳಿಯುವುದಿಲ್ಲವೊ ಅವನು ಎಲ್ಲದರ ಜ್ಞಾನವನ್ನೂ ಕಳೆದುಕೊಳ್ಳುತ್ತಾನೆ.

— ಯೇಸು ಕ್ರಿಸ್ತ

ಧರ್ಮನಿರಪೇಕ್ಷತೆಯ ಹೆಸರಿನಲ್ಲಿ ಈ ಜೀವದಾಯಕವಾದ ಸನಾತನ ಸತ್ಯಗಳಿಂದ ನಮ್ಮ ಮಕ್ಕಳನ್ನು ವಂಚಿಸುತ್ತಿರುವುದು ಇಂದಿನ ಶಿಕ್ಷಣವ್ಯವಸ್ಥೆಯಲ್ಲಿ ಬೇರೂರಿರುವ ನೇತ್ಯಾತ್ಮಕ ನಿಲುವಿಗೆ ಕನ್ನಡಿ ಹಿಡಿದಂತಿದೆ. ಈ ಅದ್ಭುತ ಜಗತ್ತು ನಮಗೆ ಏನೆಲ್ಲ ಕೊಟ್ಟಿತು, ಏನೆಲ್ಲ ಕೊಟ್ಟಿದೆ, ನಮ್ಮ ಪೂರ್ವಜರು ಬಾಳಿನ ಸಮಸ್ಯೆಗಳನ್ನು ಹೇಗೆ ನೋಡಿದರು, ಲೌಕಿಕವೇ ಆಗಲಿ, ಪಾರಮಾರ್ಥಿಕವೇ ಆಗಲಿ ಅವರು ಕಂಡುಕೊಂಡ ಪರಿಹಾರಗಳ ಸ್ವರೂಪ ಎಂಥದ್ದು ಎಂಬ ಒಂದು ಪರಂಪರೆಯ ಪ್ರಜ್ಞೆ ಇಲ್ಲದ ಯಾವುದೇ ವ್ಯಕ್ತಿಯಾಗಲಿ, ಸಮುದಾಯವಾಗಲಿ ಸ್ವಾಸ್ಥ್ಯಜೀವನ ನಡೆಸುವುದು ಅಶಕ್ಯವಾಗುತ್ತದೆ ಎಂಬುದು ಸ್ವಾಮೀಜಿಯವರ ನಿಲುವಾಗಿತ್ತು. ಸ್ವಾಮಿ ವಿವೇಕಾನಂದರು ಶಿಕ್ಷಣದಲ್ಲಿನ ಈ ನಕಾರಾತ್ಮಕ ಅಂಶಗಳು ಹೇಗೆ ನಮ್ಮ ಅವನತಿಗೆ ಕಾರಣವಾಗಿವೆ ಎಂಬುದನ್ನು ತಿಳಿಸುತ್ತಾ ನುಡಿದ ಎಚ್ಚರಿಕೆಯ ಮಾತುಗಳನ್ನು ನಾವು ನೆನಪಿಸಿಕೊಳ್ಳುವುದು ಒಳ್ಳೆಯದು: 'ಯಾವುದೇ ವ್ಯಕ್ತಿಯಾಗಲಿ ಸಮುದಾಯವಾಗಲಿ ತನ್ನ ತಲೆಮಾರಿನವರ ಸಾಧನೆ, ಸಿದ್ಧಿಗಳ ಬಗ್ಗೆ ಅರಿವಿಲ್ಲದೆ ತನ್ನನ್ನು ತಾನೇ ಭರ್ತ್ಸನೆ ಮಾಡಿಕೊಳ್ಳಲು ತೊಡಗಿದಾಗ ಅಂತಹ ವ್ಯಕ್ತಿಯ ಅಥವಾ ಸಮುದಾಯದ ವಿನಾಶ ದೂರವೇನಿಲ್ಲ.' ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಮರೆಯುವ ಅಮಾನುಷ ಸಮಾಜ ನಮ್ಮದಾಗಬಾರದು.

ಕತ್ತಲೆಯನ್ನು ದೂರುತ್ತಾ ಕುಳಿತುಕೊಂಡಿರುವುದಕ್ಕಿಂತ ಒಂದು ಸಣ್ಣ ಹಣತೆ ಬೆಳಗುವುದು ಹೆಚ್ಚು ಪ್ರಯೋಜನಕರ.

— ಕನ್‌ಫ್ಯೂಷಿಯಸ್ (Confucious)

ಸ್ವಾಮಿ ವಿವೇಕಾನಂದರಿಂದ ನಿರೂಪಿತವಾದ ಶಿಕ್ಷಣದ ಉದಾತ್ತವಾದ ಆದರ್ಶಗಳು ಈ ನಾಡಿನಲ್ಲಿ ವ್ಯಾಪಕವಾಗಿ ಕೃತಿಗಿಳಿಸಲ್ಪಡುತ್ತವೆ ಎಂದು ಅವರೇನೂ ತಿಳಿದಿರಲಿಲ್ಲ. ಕಾರಣ ಶತಶತಮಾನಗಳ ಕಾಲ ದಾಸ್ಯವನ್ನನುಭವಿಸಿದ ಈ ನಾಡಿನ ಜನರಲ್ಲಿ ಮನೆಮಾಡಿರುವ ಕೀಳರಿಮೆ ಅಷ್ಟು ಸುಲಭವಾಗಿ ತೊಲಗುತ್ತದೆ ಎಂಬ ಭ್ರಾಂತಿಯೇನೂ ಅವರಿಗಿರಲಿಲ್ಲ. ಈ ಕೀಳರಿಮೆ ಅವರ ಕಾಲದಲ್ಲಿಯೇ ಜನರ ಆಚಾರ ವ್ಯವಹಾರಗಳಲ್ಲಿ, ಪಾಶ್ಚಾತ್ಯರ ಅಂಧಾನುಕರಣೆಯಲ್ಲಿ ವ್ಯಕ್ತವಾಗುತ್ತಿತ್ತು. ಆದರೆ ಪಾಶ್ಚಾತ್ಯರಲ್ಲಿರುವ ವೈಜ್ಞಾನಿಕ ಶಿಸ್ತು, ಸಂಘಟನೆಯ ಕೌಶಲ್ಯ ಇವುಗಳಾವುದರ ಬಗ್ಗೆಯೂ ಆಕರ್ಷಿತವಾಗದ ನಿಷ್ಕ್ರಿಯ, ಆಲಸ್ಯ ಜನಾಂಗದ ಅವನತಿಯನ್ನು ಕಂಡು ಮರುಗಿದರು. ಈ ದೇಶ ತನ್ನತನವನ್ನು ಕಳೆದುಕೊಳ್ಳುವುದರಿಂದ ಆಗುವ ಅನರ್ಥಗಳ ಬಗ್ಗೆಯೂ ಎಚ್ಚರಿಕೆಯನ್ನಿತ್ತಿದ್ದರು. ಈ ಹಿನ್ನೆಲೆಯಲ್ಲಿಯೇ ಅವರು ಮಕ್ಕಳಿಗೆ ಆತ್ಮಗೌರವ ಕೊಡುವ, ರಾಷ್ಟ್ರನಿರ್ಮಾಣ ಮಾಡುವ, ಈ ದೇಶದ ಭವ್ಯ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಶಿಕ್ಷಣದ ರೂಪರೇಖೆಗಳನ್ನು ಹಾಕಿಕೊಟ್ಟರು. 'ಭಾರತೀಯರು ನಾವು ಎಂದು ಹೆಮ್ಮೆ ತಾಳಿ, ಭಾರತೀಯರು ನಾವು ಎಂದು ಸಾರಿ ಹೇಳಿ' ಎಂದು ಕರೆ ಕೊಟ್ಟರು ಸ್ವಾಮೀಜಿ. ಈ ದೇಶದ ಶಿಕ್ಷಣದ ಜವಾಬ್ದಾರಿಯನ್ನು ಕೆಲವು ನಿಷ್ಠಾವಂತ ಯುವಕರು ಮುಂದೆ ಬಂದು ವಹಿಸಿಕೊಳ್ಳಬೇಕೆಂದು ಅವರು ಬಯಸಿದ್ದರು. ಅವರ ಕರೆಗೆ ಓಗೊಟ್ಟು, ಭಾರತೀಯತೆಯನ್ನು ಉಳಿಸಿಕೊಳ್ಳಲು ಬದ್ಧವಾಗಿರುವ ವ್ಯಕ್ತಿಗಳು, ಸಮುದಾಯಗಳು, ಸಂಘಟನೆಗಳು, "ಕತ್ತಲೆಯನ್ನು ದೂರುತ್ತಾ ಕುಳಿತುಕೊಂಡಿರುವುದಕ್ಕಿಂತ ಒಂದು ಸಣ್ಣ ಹಣತೆ ಬೆಳಗುವುದು ಹೆಚ್ಚು ಪ್ರಯೋಜನಕರ" ಎಂಬ ಕನ್‌ಫ್ಯೂಷಿಯಸ್‌ನ ಹೇಳಿಕೆಯಂತೆ, ವಿವೇಕದಿಂದ ಕಾರ್ಯಪ್ರವೃತ್ತರಾಗಿರುವುದೇ ಒಂದು ಸಮಾಧಾನದ ಸಂಗತಿ.